NOTICE

UTI FIXED TERM INCOME FUND - SERIES XXIII - II (1210 DAYS)

NFO opens on	Tuesday, November 28, 2017
NFO closes on	Tuesday, December 12, 2017
Date of allotment	Wednesday, December 13, 2017
Maturity date	Tuesday, April 06, 2021

During the New Fund Offer, the units of the scheme will be sold at the face value of ₹10/- per unit.

Mumbai
November 27, 2017 **Toll Free No.: 1800 22 1230** **Website: www.utimf.com**

For Existing Registered Investors

Type ESOA to 5607090 to request for Account Statement.*

Type BAL <Folio no> to 5607090 to know your Folio Balance.*

#Subject to Terms & Conditions

The time to invest now is through - UTI SIP

REGISTERED OFFICE: UTI Tower, 'Gn' Block, Bandra Kurla Complex, Bandra (E), Mumbai - 400051. Phone: 022 – 66786666. UTI Asset Management Company Ltd. (Investment Manager for UTI Mutual Fund) E-mail: invest@uti.co.in, (CIN-U65991MH2002GOI137867).
For more information, please contact the nearest UTI Financial Centre or your AMFI/NISM certified UTI Mutual Fund Independent Financial Advisor, for a copy of Statement of Additional Information, Scheme Information Document and Key Information Memorandum cum Application Form.
UTI-SIP is only an investment approach applied to various equity, debt and balanced schemes of UTI Mutual Fund (UTI MF) and is not the name of a scheme / plan of UTI MF.

Mutual Fund investments are subject to market risks, read all scheme related documents carefully.

Sterlite Power
Sterlite Power Transmission Limited
Registered Office: 4th Floor, Godrej Millennium, 9 Koregaon Road, Pune, Maharashtra – 411001, India
Corporate Office: F-1, The Mira Corporate Suites, 1 and 2 Ishwar Nagar, Mathura Road, New Delhi 110 065, India
CIN: U74120PN2015PLC156643 | Phone: 011 499 622 00| Fax: 011 499 622 88
Email: secretarial.grid@sterlite.com | www.sterlitepower.com

NOTICE

Notice is hereby given that the Annual General Meeting ("AGM") of the Company will be held on **Friday, December 22, 2017** at 11.00a.m. IST at 'The Westin', 36/3-B Koregaon Park Annexe, Mundhwa Road, Ghorpadi, Pune, Maharashtra – 411001,Indiato transact the businesses as set out in the Notice of AGM dated November 13, 2017("the Notice").

Pursuant to the Companies Act, 2013, the Company is offering facility to all its members to exercise their vote by electronic means on the resolutions as set out in the Notice. Members may cast their votes by using e-voting system from a place other than the venue for AGM ("remote e-voting"). The Company has engaged the services of Karvy Computershare Private Limited ("Karvy") as Authorised Agency to provide the e-voting facility.

The Notice and the Annual Report for the year ended March 31, 2017 have been dispatched/ emailed to the members of the Company. The Notice of AGM and the Annual Report are also available on the Company's website at www.sterlitepower.com and Karvy's website at https://evoting.karvy.com.

All the Members are informed that:

1. The remote e-voting period commences on **Tuesday, December 19, 2017 from 10.00 a.m. (IST) till Thursday, December 21, 2017 up to 5.00 p.m. (IST)**
2. A person, whose name appears in the Register of Members or in the Register of Beneficial Owners maintained by the depositories as on the cut-off date, i.e. **Friday, December 15, 2017** shall only be eligible to vote through remote e-voting or at the AGM.
3. A person who has become a member of the Company after dispatch of the Notice & holds shares as on the cut-off date i.e. **Friday, December 15, 2017,** may write to Karvy at einward.ris@karvy.com, requesting for user id and password. However, if the person is already registered with Karvy for remote e-voting then the existing user ID and password can be used for casting vote.
4. Members may note that: a) The remote e-voting shall not be allowed after Thursday, December 21, 2017 05.00 p.m. (IST)and once the vote on a resolution is cast by the Member, the Member shall not be allowed to change it subsequently; b)The facility for voting, through ballot paper, shall be made available at the AGM; c) Members who have cast their vote through remote e-voting may also attend the AGM but shall not be entitled to cast their vote again.
5. Persons entitled to attend and vote at the AGM, may vote in person or by proxy/ through authorized representative, provided that all proxies in the prescribed form/authorization duly signed by the person entitled to attend and vote at the meeting are deposited at the Registered Office of the Company, not later than 48 hours before the AGM.
6. CS Kuldeep Ruchandani (FCS no. 7971 & CP no. 8563) Partners, KPRC & Associates, Practicing Company Secretaries, have been appointed as the Scrutinizer to scrutinize the e-voting process in a fair and transparent manner.
7. In case of any grievances relating to the e-voting procedure Members are requested to contact Mr. Rajeev Kumar, Dy. Manager, Karvy Computershare Private Limited, Karvy Selenium Tower B, Plot 31-32, Gochibowli, Financial District, Nanakramguda, Hyderabad 500 032; email ID einward.ris@karvy.com/rajeev.kr@karvy.com; Phone No. 040-67161524. Further, in case of any query pertaining to e-voting, please visit Help & FAQ's section available at Karvy's website https://evoting.karvy.com

Members may also visit **www.sterlitepower.com** for details.

By order of the Board of Directors
For Sterlite Power Transmission Limited
Sd/-
Ashok Ganesan
Company Secretary& Compliance Officer
Place: Mumbai
Date: November 27,2017

ಗುಣಮಟ್ಟ ಹಾಗೂ ನಿರಂತರ ವಿದ್ಯುತ್ ಪೂರೈಕೆ ಮಾಡುವ ನಿಟ್ಟಿನಲ್ಲಿ ಎಲ್ಲ ಕ್ರಮ ಕೈಗೊಳ್ಳಲಾಗುವುದು.
• **ಉಮೇಶ ಕತ್ತಿ** ಶಾಸಕ

ಅಪರಿಚಿತ ವ್ಯಕ್ತಿಗಳಿಂದ ಹಲ್ಲೆ: ಆಸ್ಪತ್ರೆಗೆ ದಾಖಲು

ಚನ್ನಮ್ಮನ ಕಿತ್ತೂರು: ವ್ಯಕ್ತಿಯೊಬ್ಬರ ಮೇಲೆ ಅಪರಿಚಿತ ವ್ಯಕ್ತಿಗಳು ಹಲ್ಲೆ ನಡೆಸಿ ಪರಾರಿಯಾದ ಘಟನೆ ಪಟ್ಟಣದ ಬಸ್‌ನಿಲ್ದಾಣ ಹತ್ತಿರದ ನಿರ್ಜನ ಪ್ರದೇಶದಲ್ಲಿ ಶುಕ್ರವಾರ ರಾತ್ರಿ ನಡೆದಿರುವುದು ತಡವಾಗಿ ಬೆಳಕಿಗೆ ಬಂದಿದೆ.



ಪಟ್ಟಣದ ವಿದ್ಯಾಗಿರಿ ನಿವಾಸಿ ಕಿರಣ ಕುಲಕರ್ಣಿ (35) ಹಲ್ಲೆಗೊಳಗಾದ ವ್ಯಕ್ತಿ. ವೃತ್ತಿಯಲ್ಲಿ ಕಾರ್ ಮೆಕ್ಯಾನಿಕ್ ಆಗಿರುವ ಕಿರಣ ಅವರನ್ನು ದುಷ್ಕರ್ಮಿಗಳು ತಡರಾತ್ರಿ ಕಾರು ರಿಪೇರಿ ಮಾಡಿಕೊಡುವಂತೆ ಕರೆದುಕೊಂಡು ಹೋಗುವ ಮಾರ್ಗಮಧ್ಯೆ ಏಕಾಏಕಿ ಹಲ್ಲೆ ನಡೆಸಿದ್ದಾರೆ. ಹಲ್ಲೆಗೆ ಒಳಗಾದ ಕಿರಣ ಅವರ ಕೈ, ಕಾಲುಗಳ ಮೂಳೆ ಮುರಿದಿದ್ದು, ಪಟ್ಟಣದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಪ್ರಕರಣದಿಂದ ಕಿರಣ ಕುಲಕರ್ಣಿ ಕುಟುಂಬಸ್ಥರು ಆತಂಕಕ್ಕೆ ಒಳಗಾಗಿದ್ದಾರೆ.

ಏನಿದು ಘಟನೆ? ಶುಕ್ರವಾರ ತಡರಾತ್ರಿ ಕಿರಣ ಅವರ ಮನೆಗೆ ಬಂದ ನಾಲ್ಕು ಜನ ಅಪರಿಚಿತರು ಕಾರು ರಿಪೇರಿ ಮಾಡುವಂತೆ ಕೇಳಿಕೊಂಡಿದ್ದಾರೆ. ಆಗ ರಾತ್ರಿ ವೇಳೆಯಲ್ಲಿ ರಿಪೇರಿ ಕೆಲಸ ಮಾಡುವುದಿಲ್ಲ ಎಂದು ಕಿರಣ ತಳ್ಳಿಹಾಕಿದ್ದರು ಎನ್ನಲಾಗಿದೆ. ನಾವು ತುಮಕೂರಿಗೆ ಹೋಗಬೇಕಾಗಿದ್ದು, ಕಾರಿನಲ್ಲಿ ಮಹಿಳೆಯರಿದ್ದಾರೆ. ರಾತ್ರಿ ವೇಳೆ ತೊಂದರೆ ಆಗುತ್ತದೆ ಎಂದು ಪುನಃ ಬೇಡಿಕೊಂಡಾಗ ಕಾರ್ ರಿಪೇರಿಗೆ ಕಿರಣ ಅವರು ಒಪ್ಪಿಗೆ ಸೂಚಿಸಿ ಕಾರ್ ರಿಪೇರಿಗೆಂದು ಹೊರಟಾಗ ಮಾರ್ಗಮಧ್ಯೆ ಈ ಹಲ್ಲೆ ನಡೆದಿದೆ ಎಂದು ಹಲ್ಲೆಗೆ ಒಳಗಾದ ವ್ಯಕ್ತಿ ಕಿರಣ ಕುಲಕರ್ಣಿ ತಿಳಿಸಿದ್ದಾರೆ.

ವೇತನ ಪಾವತಿಸಲು ಆಗ್ರಹ

ದಿಢೀರ್ ಕೆಲಸ ಸ್ಥಗಿತಗೊಳಿಸಿದ ಪೌರ ಕಾರ್ಮಿಕರು | ವಾರದೊಳಗೆ ವೇತನ ಪಾವತಿಸುವ ಭರವಸೆ

• **ಕನ್ನಡಪ್ರಭ ವಾರ್ತೆ** ರಾಯಬಾಗ

ತಮಗೆ ವೇತನ ನೀಡಿಲ್ಲ ಎಂದು ಆರೋಪಿಸಿ ತಾಲೂಕಿನ ಚಿಂಚಲಿ ಪಟ್ಟಣ ಪಂಚಾಯತಿಯ ಪೌರಕಾರ್ಮಿಕರು ದಿಢೀರ್ ತಮ್ಮ ಕೆಲಸ ಕಾರ್ಯ ಬಂದ್ ಮಾಡಿದ ಹಿನ್ನೆಲೆ, ರಸ್ತೆ ಹಾಗೂ ಅಂಗಡಿ ಮುಂಗಟ್ಟುಗಳ ಮುಂದೆ ಬಿದ್ದಿರುವ ಕಸವನ್ನು ಕಂಡ ವ್ಯಾಪಾರಸ್ಥರು ಕಸವನ್ನು ತೆಗೆದುಕೊಂಡು ಬಂದು ಚಿಂಚಲಿ ಪಪಂ ಕಚೇರಿ ಮುಂದೆ ಸುರಿದು ಸೋಮವಾರ ಪ್ರತಿಭಟನೆ ನಡೆಸಿದರು.

ವ್ಯಾಪಾರಸ್ಥ ಅಜೀತ ದಂಡಾಪೂರೆ ಮಾತನಾಡಿ, ಚಿಂಚಲಿ ಮಾಯಕ್ಕಾದೇವಿಯ ದರ್ಶನಕ್ಕೆ ದಿನನಿತ್ಯ ಸಾವಿರಾರು ಭಕ್ತರು ಆಗಮಿಸುತ್ತಾರೆ. ಪಟ್ಟಣ ಪಂಚಾಯತಿಯವರು ಪೌರ ಕಾರ್ಮಿಕರಿಗೆ ಏಳು ತಿಂಗಳಿನಿಂದ ಸಂಬಳ ನೀಡಿಲ್ಲ. ಹೀಗಾದರೆ ಅವರು ದಿನನಿತ್ಯ ಜೀವನ ಹೇಗೆ ನಡೆಸುತ್ತಾರೆ? ಅವರಿಗೆ ಸಂಬಳ ನೀಡದಿರುವುದರಿಂದಲೇ ಅವರು ಇಂದು ಪಟ್ಟಣ ಸ್ವಚ್ಛಗೊಳಿಸಿಲ್ಲ. ಇದರಿಂದ ಪಟ್ಟಣದ ಆರೋಗ್ಯ ಹದಗೆಡುತ್ತದೆ ಎಂದು ಪಪಂ ಮುಖ್ಯಾಧಿಕಾರಿ ವಿರುದ್ಧ ಹರಿಹಾಯ್ದರು.

ಪೌರಕಾರ್ಮಿಕ ಗೋಪಾಲ ಪರಿಟ ಮಾತನಾಡಿ, ನಮಗೆ ಏಳು ತಿಂಗಳ ಸಂಬಳ ನೀಡಿಲ್ಲ. ಅದಕ್ಕೆ ಇಂದು ನಾವು ಎಲ್ಲ ಸಿಬ್ಬಂದಿ ಕಸ ಗೂಡಿಸಿಲ್ಲ. ಸಂಬಳದ ಬಗ್ಗೆ ಮುಖ್ಯಾಧಿಕಾರಿಗಳ ಗಮನಕ್ಕೆ ತಂದರೂ ಅವರು ಕೊಡುತ್ತೇನೆ ಎಂದು ಎಂದು ದಿನವನ್ನು ಮುಂದೂಡುತ್ತಿದ್ದಾರೆ ಎಂದು ಆರೋಪಿಸಿದರು. ಪಪಂ ಮುಖ್ಯಾಧಿಕಾರಿ ಎ.ಎಂ. ರಾನವಗೋಳ ದೂರವಾಣಿ ಮೂಲಕ ಶೀಘ್ರ ವೇತನ ಪಾವತಿಸುವ ಬಗ್ಗೆ ಕ್ರಮ ಕೈಗೊಳ್ಳುವ ಭರವಸೆ ನೀಡಿದ ಹಿನ್ನೆಲೆ ಪ್ರತಿಭಟನಾಕಾರರು ಪ್ರತಿಭಟನೆ ಹಿಂಪಡೆದು ಕೆಲಸಕ್ಕೆ ಹಾಜರಾದರು. ಸುಭಾಷ ಪಾಟೀಲ, ಚಿದು ಕರಾಡೆ, ತುಕಾರಾಮ ಮೋರೆ, ಸುನೀಲ ಧರ್ಮಣ್ಣವರ, ಭರತೇಶ ಘೊಂಘಡಿ, ವಿವೇಕ ಮಾಳಿ, ಸೇರಿದಂತೆ ಅಂಗಡಿಕಾರರು ಉಪಸ್ಥಿತರಿದ್ದರು.

ನಾನು ಅಧಿಕಾರ ಸ್ವೀಕರಿಸಿ ಮೂರೂವರೆ ತಿಂಗಳಾಗಿವೆ. ಅದರಲ್ಲಿಯೂ ನಾನು ಕಾರ್ಮಿಕರ ಎರಡೂವರೆ ತಿಂಗಳ ಸಂಬಳ ನೀಡಿದ್ದೇನೆ. ಒಂದು ವಾರದೊಳಗೆ ಅವರ ಬಾಕಿ ವೇತನ ಕೊಡಲಾಗುವುದು.
• **ಎ.ಎಂ. ರಾನವಗೋಳ,** ಪಪಂ ಮುಖ್ಯಾಧಿಕಾರಿ ಚಿಂಚಲಿ

ವೇತನ ನೀಡಿಲ್ಲ ಎಂದು ಆರೋಪಿಸಿ ತಾಲೂಕಿನ ಚಿಂಚಲಿ ಪಟ್ಟಣ ಪಂಚಾಯತಿಯ ಪೌರಕಾರ್ಮಿಕರು ದಿಢೀರ್ ತಮ್ಮ ಕೆಲಸ ಕಾರ್ಯ ಬಂದ್ ಮಾಡಿದ ಹಿನ್ನೆಲೆ, ರಸ್ತೆ ಹಾಗೂ ಅಂಗಡಿ ಮುಂಗಟ್ಟುಗಳ ಮುಂದೆ ಬಿದ್ದಿರುವ ಕಸವನ್ನು ಕಂಡ ವ್ಯಾಪಾರಸ್ಥರು ಕಸವನ್ನು ತೆಗೆದುಕೊಂಡು ಬಂದು ಚಿಂಚಲಿ ಪಪಂ ಕಚೇರಿ ಮುಂದೆ ಸುರಿದು ಸೋಮವಾರ ಪ್ರತಿಭಟನೆ ನಡೆಸಿದರು.

ಮರಾಠಾ ಸಮಾಜದವರಿಂದ ಪ್ರತಿಭಟನೆ

ಮರಾಠಾ ಸಮಾಜ 2ಎಗೆ ಸೇರಿಸಿ

• **ಕನ್ನಡಪ್ರಭ ವಾರ್ತೆ** ಬೈಲಹೊಂಗಲ

ಮರಾಠಾ ಸಮಾಜ 2ಎ ಪ್ರವರ್ಗಕ್ಕೆ ಸೇರಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಮರಾಠಾ ಸಮಾಜದ ತಾಲೂಕು ಘಟಕದ ಪದಾಧಿಕಾರಿಗಳು ಪಟ್ಟಣದಲ್ಲಿ ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು.

ಪಟ್ಟಣದ ವೀರರಾಣಿ ಕಿತ್ತೂರು ಚೆನ್ನಮ್ಮ ವೃತ್ತದಲ್ಲಿ ನೂರಾರು ಸಂಖ್ಯೆಯಲ್ಲಿ ಸೇರಿದ ಮರಾಠಾ ಸಮಾಜದವರು ಎಸಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಬೃಹತ್ ಮೆರವಣಿಗೆಯ ಮೂಲಕ ಎಪಿಎಂಸಿ ದೇವಸ್ಥಾನ, ಇಂಚಲ ಕ್ರಾಸ್, ಕೇಂದ್ರ ಬಸ್ ನಿಲ್ದಾಣ ಹಾಗೂ ರಾಯಣ್ಣ ವೃತ್ತದ ಮೂಲಕ ಹಾಯ್ದು ಬೃಹತ್ ಪ್ರತಿಭಟನಾ ಮೆರವಣಿಗೆ ಸಮಾರಂಭದ ವೇದಿಕೆಗೆ ಬಂದು ತಲುಪಿತು. ದಾರಿಯುದ್ದಕ್ಕೂ ಕೇಸರಿ ಧ್ವಜಗಳು ರಾರಾಜಿಸಿದವು. ಕೇಸರಿ ಪೇಟ ಧರಿಸಿದ ಮಹಿಳೆಯರು, ಮುಖಂಡರು ನೋಡುಗರ ಗಮನ ಸೆಳೆದರು.

ಕೂಡಲೇ ರಾಜ್ಯ ಸರ್ಕಾರ ಮರಾಠಾ ಸಮಾಜವನ್ನು 2ಎ ಪ್ರವರ್ಗಕ್ಕೆ ಸೇರಿಸಿ ಸರ್ಕಾರದ ಸವಲತ್ತು ನೀಡಿ, ಮರಾಠಾ ಸಮಾಜವನ್ನು ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಬೆಳೆಯಲು ಹೆಚ್ಚಿನ ಅನುಕೂಲ ಮಾಡಿಕೊಡಬೇಕೆಂದು ಒತ್ತಾಯಿಸಿದರು.

ಇದೇ ಸಂದರ್ಭದಲ್ಲಿ ರೈತರ ಉತ್ಪಾದನೆಗೆ ಬೆಂಬಲ ಬೆಲೆ ಘೋಷಿಸಿ ಡಾ. ಸ್ವಾಮಿನಾಥನ್ ಆಯೋಗದ ಶಿಪಾರಸು ಅನುಷ್ಠಾನಗೊಳಿಸಬೇಕು. ರಾಜರ್ಷಿ ಶಾಹುಮಹಾರಾಜರ ಮರಾಠಾ ಅಭಿವೃದ್ಧಿ ಮಹಾಮಂಡಳಿ ಸ್ಥಾಪಿಸಿ ಮರಾಠಾ ಸಮುದಾಯಕ್ಕೆ ಆರ್ಥಿಕ, ಇತರೇ ಸೌಲಭ್ಯ ಕಲ್ಪಿಸಬೇಕು. ಮರಾಠಾ ಭಾಷೆಗೆ ಅಲ್ಪ ಸಂಖ್ಯಾತ ಭಾಷಾ ಸ್ಥಾನಮಾನ ನೀಡಬೇಕೆಂದು ಆಗ್ರಹಿಸಿ ಎಸಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಜಿಪಂ ಸದಸ್ಯ ಶಂಕರ ಮಾಡಲಗಿ, ಮುಖಂಡರಾದ ವಿಠ್ಠಲ ಬಡ್ಲಿ, ವಿಠ್ಠಲ ದಾಸೋಗ, ಅಶೋಕ ರಾವುಳ, ಯಲ್ಲಪ್ಪ ಬಡ್ಲಿ, ಪುಂಡಲೀಕ ಗಾಡದ, ಮಾರುತಿ ತಿಗಡಿ, ಆನಂದ ತಡಕೋಡ, ಅಶೋಕ ಯರಗಟ್ಟಿ, ಗೋಪಾಲ ರಾಜಗೋಳಿ, ವಿಠ್ಠಲ ಯಾಸನ್ನವರ, ಲಕ್ಷ್ಮಣ ಯರಗಟ್ಟಿ, ಲಕ್ಷ್ಮಣ ಬಡ್ಲಿ, ಮಲ್ಲಕಾರ್ಜುನ ಶಿರ್ಕೆ, ಶಿವಾನಂದ ಬೆಳಗಾವಿ, ನಾರಾಯಣ ನಲವಡೆ, ವಿಜಯ ಬಡ್ಲಿ, ಬಸವರಾಜ ಯಾಸನ್ನವರ, ಕುಮಾರ ರಾಜಗೋಳಿ, ಗುರು ರಾವುಳ, ಅನಿಲ ಸಾವಂತ, ಬಸವರಾಜ ಗಾಡದ, ರವಿ ಬಡ್ಲಿ ಹಾಗೂ ನೂರಾರು ಸಮಾಜದ ಮುಖಂಡರು ಇದ್ದರು.

ಮರಾಠಾ ಸಮಾಜ 2ಎ ಪ್ರವರ್ಗಕ್ಕೆ ಸೇರಿಸು ವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿ ಸುವಂತೆ ಆಗ್ರಹಿಸಿ ಮರಾಠಾ ಸಮಾಜದ ತಾಲೂಕು ಘಟಕದ ಪದಾಧಿಕಾರಿಗಳು ಪಟ್ಟಣದಲ್ಲಿ ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು.

ನಿರಂತರ ವಿದ್ಯುತ್ ಪೂರೈಕೆಗೆ ಶೀಘ್ರ ಕ್ರಮ

ದೀನ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಗೆ ಭೂಮಿಪೂಜೆ

• **ಕನ್ನಡಪ್ರಭ ವಾರ್ತೆ** ಹುಕ್ಕೇರಿ

ಗುಣಮಟ್ಟ ಹಾಗೂ ನಿರಂತರ ವಿದ್ಯುತ್ ಪೂರೈಕೆ ಮಾಡುವ ನಿಟ್ಟಿನಲ್ಲಿ ಎಲ್ಲ ಕ್ರಮ ಕೈಗೊಳ್ಳಲಾಗಿದೆ ಎಂದು ಶಾಸಕ ಉಮೇಶ ಕತ್ತಿ ಹೇಳಿದರು.

ತಾಲೂಕಿನ ಕೊಟಬಾಗಿ ಬಳಿಯ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ವಿದ್ಯುತ್ ವಿತರಣಾ ಉಪಕೇಂದ್ರದಲ್ಲಿ ಸೋಮವಾರ ನಡೆದ ದೀನ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿಯ ಈ ಗ್ರಾಮಜ್ಯೋತಿಯೋಜನೆಅನುಷ್ಠಾನಗೊಳಿಸಲು ಸುಮಾರು 83 ಕೋಟಿ ವೆಚ್ಚದ ಕ್ರಿಯಾ ಯೋಜನೆ ರೂಪಿಸಲಾಗಿದೆ. ಈ ಪೈಕಿ ಮೊದಲ ಹಂತದಲ್ಲಿ 7 ಕೋಟಿ ಬಿಡುಗಡೆಯಾಗಿದೆ. ಹಳೆ ವಿದ್ಯುತ್ ಸಂಪರ್ಕ ತಂತಿಗಳ ಬದಲಾವಣೆ ಹಾಗೂ ದುರಸ್ತಿ, ನೂತನ ಫೀಡರ್ ಅಳವಡಿಸಿ ಒತ್ತಡಗಳನ್ನು ತಡೆಯುವುದು, ವಿದ್ಯುತ್ ಸಂಪರ್ಕ ವ್ಯಾಪ್ತಿಯನ್ನು ವಿಸ್ತರಿಸುವುದು ಸೇರಿದಂತೆ ಅನೇಕ ಕೆಲಸಗಳನ್ನು ಕೈಗೊಳ್ಳಲಾಗುವುದು. ಈ ಮೂಲಕ ರೈತರು ಹಾಗೂ ಗ್ರಾಹಕರಿಗೆ ಗುಣಮಟ್ಟ ಹಾಗೂ ನಿರಂತರ ವಿದ್ಯುತ್ ಪೂರೈಸಲು ಎಲ್ಲ ಕ್ರಮ ಕೈಗೊಳ್ಳಲಾಗಿದೆ ಎಂದರು.

ಹುಕ್ಕೇರಿ ತಾಲೂಕಿಗೆ ಅಗತ್ಯವಿರುವ ಸುಮಾರು 150 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ವಂಟಮುರಿ ಗುಡ್ಡುಗಾಡು ಪ್ರದೇಶ ಹಾಗೂ ಹಿಡಕಲ್ ಡ್ಯಾಂ ಪ್ರೊಜೆಕ್ಟ್ ವ್ಯಾಪ್ತಿಯಲ್ಲಿ ಇರುವ ಎತ್ತರದ ಪ್ರದೇಶದಲ್ಲಿ ಸೋಲಾರ್ ಅಳವಡಿಸಲು ರಾಜ್ಯ ಸರ್ಕಾರಕ್ಕೆ ಅಗತ್ಯ ಪ್ರಸ್ತಾವನೆ ಕಳುಹಿಸಲಾಗುವುದು. ಈ ಮೂಲಕ ತಾಲೂಕಿನ ಜನತೆಗೆ ಬೇಕಾದ ವಿದ್ಯುತ್ ಅನ್ನು ಇಲ್ಲಿಯೇ ಉತ್ಪಾದಿಸುವ ಉದ್ದೇಶ ಹೊಂದಲಾಗಿದ್ದು, ಹೆಚ್ಚುವರಿ ವಿದ್ಯುತ್ ಅನ್ನು ಬೆಳಗಾವಿ ಹಾಗೂ ಕೊಲ್ಲಾಪುರ ನಗರ ಪ್ರದೇಶಗಳಿಗೆ ಮಾರಾಟ ಮಾಡಲಾಗುವುದು ಎಂದರು.

ಹುಕ್ಕೇರಿ ಮತಕ್ಷೇತ್ರ ಬದಿಯಲ್ಲಿಯೇ ಇರುವ ಯಮಕನಮರಡಿ ಹಾಗೂ ಚಿಕ್ಕೋಡಿ ಕ್ಷೇತ್ರಗಳಿಗೆ ಹೆಚ್ಚಿನಅನುದಾನಮಂಜೂರುಮಾಡಲಾಗುತ್ತಿದೆ. ರಾಜ್ಯ ಸರ್ಕಾರ ಹುಕ್ಕೇರಿ ಕ್ಷೇತ್ರದ ಅಭಿವೃದ್ಧಿ ಕೆಲಸಗಳಿಗೆ ಅಗತ್ಯ ಅನುದಾನ ನೀಡುತ್ತಿಲ್ಲ. ಈ ಕ್ಷೇತ್ರದಿಂದ ವಿರೋಧ ಪಕ್ಷವಾದ ಬಿಜೆಪಿ ಶಾಸಕರು ಪ್ರತಿನಿಧಿಸುತ್ತಿದ್ದಾರೆ ಎಂಬ ಕಾರಣಕ್ಕೆ ಅನುದಾನ ಬಿಡುಗಡೆಯಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂದು ಅವರು ಆರೋಪಿಸಿದರು.

ಸಂಘದ ಅಧ್ಯಕ್ಷ ಬಸವರಾಜ ಮರಡಿ, ನಿರ್ದೇಶಕ ಸುರೇಂದ್ರ ದೊಡ್ಡಲಿಂಗನವರ, ಅಬ್ದುಲ್ ಮುನಾಫ ಅತ್ತಾರ, ಕೆ. ಕೆ.ಬೆನಚಿನಮರಡಿ, ವ್ಯವಸ್ಥಾಪಕ ನಿರ್ದೇಶಕ ಎಸ್.ಎಸ್.ಪೂಜೇರಿ, ಬಿಜೆಪಿ ಬ್ಲಾಕ್ ಅಧ್ಯಕ್ಷ ಪರಗೌಡ ಪಾಟೀಲ, ತಾಪಂ ಸದಸ್ಯ ಬಾಳಾಸಾಹೇಬ ನಾಯಿಕ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಅಪ್ಪಾಸಾಹೇಬ ಸಂಕನ್ನವರ ಮತ್ತಿತರರು ಉಪಸ್ಥಿತರಿದ್ದರು. ಸ್ಥಾನಿಕ ಅಭಿಯಂತರ ನೇಮಿನಾಥ ಖೆಮಲಾಪೂರೆ ನಿರೂಪಿಸಿದರು. ವ್ಯವಸ್ಥಾಪಕ ದುರದುಂಡಿ ನಾಯಿಕ ವಂದಿಸಿದರು.

ಹುಕ್ಕೇರಿ ತಾಲೂಕಿನ ಕೊಟಬಾಗಿ ಬಳಿಯ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ವಿದ್ಯುತ್ ವಿತರಣಾ ಉಪಕೇಂದ್ರದಲ್ಲಿ ದೀನ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಗೆ ಶಾಸಕ ಉಮೇಶ ಕತ್ತಿ ಸೋಮವಾರ ಭೂಮಿಪೂಜೆ ನೆರವೇರಿಸಿದರು.

12 ಗಂಟೆ ತ್ರಿಫೇಸ್ ವಿದ್ಯುತ್ ಪೂರೈಸಿ

• **ಕನ್ನಡಪ್ರಭ ವಾರ್ತೆ** ಕಾಗವಾಡ

ರೈತರ ವಿದ್ಯುತ್ ಪಂಪ್‌ಸೆಟ್‌ಗಳಿಗೆ ನಿತ್ಯ 12 ಗಂಟೆ ತ್ರಿಫೇಸ್ ವಿದ್ಯುತ್ ಪೂರೈಸುವಂತೆ ಆಗ್ರಹಿಸಿ ಈ ಭಾಗದ ರೈತರು ಕಾಗವಾಡ ಹೆಸ್ಕಾಂ ಇಲಾಖೆ ಅಧಿಕಾರಿ ಜಿ.ಎಸ್. ಕೋಳಕರಗೆ ಮನವಿ ಸಲ್ಲಿಸಿದರು.

ಕಾಗವಾಡ, ಶೇಡಬಾಳ, ಲೋಕುರ ಗ್ರಾಮಗಳ ರೈತರು ಕಾಗವಾಡ ಹೆಸ್ಕಾಂ ಇಲಾಖೆಗೆ ತೆರಳಿ ನಿವೃತ್ತ ನ್ಯಾಯಾಧೀಶ ಪ್ರಕಾಶ ಕಠಾರೆಯವರ ನೇತೃತ್ವದಲ್ಲಿ ಮನವಿ ಸಲ್ಲಿಸಿದರು.

ಪ್ರಕಾಶ ಕಠಾರೆ ಮಾತನಾಡಿ, ಈಗಾಗಲೇ ಹೆಸ್ಕಾಂ ಇಲಾಖೆ ಈ ಭಾಗದ ರೈತರ ಪಂಪ್ ಸೆಟ್‌ಗಳಿಗೆ ಪೂರೈಸುತ್ತಿರುವ 7 ಗಂಟೆ ತ್ರಿಫೇಸ್ ವಿದ್ಯುತ್ ಯಾವುದಕ್ಕೂ ಸಾಲದಂತಾಗಿದೆ. ಮುಂದಿನ ದಿನಗಳಲ್ಲಿ 12 ಗಂಟೆ ತ್ರಿಫೇಸ್ ವಿದ್ಯುತ್ ಪೂರೈಸುವಂತೆ ಒತ್ತಾಯಿಸಿದರು.

ಹೆಸ್ಕಾಂ ಇಲಾಖೆಯ ಅಧಿಕಾರಿ ಜಿ.ಎಸ್. ಕೋಳಕರ ಮನವಿ ಸ್ವೀಕರಿಸಿ ಮಾತನಾಡಿ, ಈ ಭಾಗದ ರೈತರ ವಿದ್ಯುತ್ ಬೇಡಿಕೆಯ ಕುರಿತು ಮೇಲಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆಗೆ ಪರಿಹಾರ ದೊರಕಿಸಿ ಕೊಡುವ ಪ್ರಾಮಾಣಿಕ ಪ್ರಯತ್ನ ತಾವು ಮಾಡುವುದಾಗಿ ಭರವಸೆ ನೀಡಿದರು. ರೈತ ಮುಖಂಡರಾದ ಸುಭಾಷ ಕಠಾರೆ, ಪ್ರಕಾಶ ಕಠಾರೆ, ಅಯೂಬ ಮಾಹಾಂತ, ಶಶಿಕಾಂತ ಜೋಶಿ, ಪ್ರಮೋದ ಕಠಾರೆ, ಮಹಾವೀರ ಬಿಂದಗೆ, ಜಾವೇದ ಸೈಯದ್, ಅಶೋಕ ಕುಡಚೆ, ಕಿರಣ ಯಂದಗೌಡರ, ರಾಜು ಮಾಂಗುರೆ, ರಮೇಶ ಸಿಂಧೆ, ಪ್ರಕಾಶ ಕಿನಂಗೆ ಸೇರಿದಂತೆ ಅನೇಕ ನೀರಾವರಿ ಸಂಘಗಳ ಪದಾಧಿಕಾರಿಗಳು, ರೈತರು ಅಪಾರ ಸಂಖ್ಯೆಯಲ್ಲಿ ಇದ್ದರು.

ಪಂಪ್‌ಸೆಟ್‌ಗಳಿಗೆ ನಿತ್ಯ 12 ಗಂಟೆ ತ್ರಿಫೇಸ್ ವಿದ್ಯುತ್ ಪೂರೈಸುವಂತೆ ಆಗ್ರಹಿಸಿ ಕಾಗವಾಡ ಸುತ್ತಲಿನ ರೈತರು ಕಾಗವಾಡ ಹೆಸ್ಕಾಂ ಇಲಾಖೆ ಅಧಿಕಾರಿ ಜಿ.ಎಸ್.ಕೋಳಕರಗೆ ಮನವಿ ಸಲ್ಲಿಸಿದರು.

ಕೌಟುಂಬಿಕ ಕಲಹಕ್ಕೆ ಬೇಸತ್ತು ಬೆಂಕಿ ಹಚ್ಚಿಕೊಂಡು ಮಹಿಳೆ ಆತ್ಮಹತ್ಯೆ

ಚಿಕ್ಕೋಡಿ: ಕೌಟುಂಬಿಕ ಕಲಹ ಹಿನ್ನೆಲೆಯಲ್ಲಿ ವಿವಾಹಿತ ಮಹಿಳೆಯೊಬ್ಬರು ಮೈಮೇಲೆ ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಪಟ್ಟಣದ ಇಂದಿರಾನಗರದ ಕಿವಡ ಪೆಟ್ರೋಲ್ ಬಂಕ್ ಬಳಿ ಭಾನುವಾರ ತಡರಾತ್ರಿ ನಡೆದಿದೆ. ಸ್ಮಿತಾ ಗಣಾಚಾರಿ (32) ಮೃತ ಮಹಿಳೆ. ಕಳೆದ ಎರಡು ದಿನಗಳಿಂದ ಪತಿ-ಪತ್ನಿಯರ ಮಧ್ಯೆ ಕಲಹ ನಡೆದಿತ್ತು. ಭಾನುವಾರ ರಾತ್ರಿ ಇಬ್ಬರ ಜಗಳ ವಿಕೋಪಕ್ಕೆ ತಿರುಗಿದ ಕಾರಣ ಸಾವಿಗೆ ಶರಣಾಗಿದ್ದಾರೆ. ಸ್ಮಿತಾಳ ತವರೂರು ಹಾರೂಗೇರಿ ಪಟ್ಟಣವಾಗಿದೆ. ಮೃತರಿಗೆ ಇಬ್ಬರು ಮಕ್ಕಳು ಇದ್ದಾರೆ. ಚಿಕ್ಕೋಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶ್ರೀ ರೇಣುಕಾ ಶುಗರ್ಸ್ ಲಿಮಿಟೆಡ್
SHREE RENUKA SUGARS
ನೋಂದಾಯಿತ ಕಛೇರಿ : ಬಿಸಿ 105, ಹ್ಯಾವೆಲಾಕ್ ರಸ್ತೆ, ಕ್ಯಾಂಪ್, ಬೆಳಗಾಂ-590001.
ದೂ. ಸಂ.: +91-831-2404000; ಫ್ಯಾಕ್ಸ್ ಸಂ.: +91-831-2469891;
ಇಮೇಲ್: einward.ris@karvy.com ವೆಬ್‌ಸೈಟ್ : www.renukasugars.com
CIN : L01542KA1995PLC019046

"ತಿಳುವಳಿಕೆ"

ಈ ಮೂಲಕ ತಿಳುವಳಿಕೆ ನೀಡುವುದೇನೆಂದರೇ:

1. ಕಂಪನಿಯ 21ನೇ ವಾರ್ಷಿಕ ಮಹಾಸಭೆಯು (ಎಜಿಎಂ) ಇದೇ 21ನೇ ಡಿಸೆಂಬರ್ 2017ರ ಗುರುವಾರದಂದು ಬೆಳಿಗ್ಗೆ 11.30 ಕ್ಕೆ ದಿ ಥಿಯೋಸಾಫಿಕಲ್ ಸೊಸೈಟಿ, ಬೆಳಗಾವಿ ಲಾಡ್ಜ್, ಗೋಗ್ಟೆ ರಂಗ್‌ಮಂದಿರ್ ಹಾಲ್ (ಸ್ಕೂಲ್ ಆಫ್ ಕಲ್ಚರ್), 185, ರಾಮ್ ಘಾಟ್ ರಸ್ತೆ ಕ್ಯಾಂಪ್, ಬೆಳಗಾವಿ-590001, ಕರ್ನಾಟಕರಲ್ಲಿ 21ನೇ ನವೆಂಬರ್, 2017ರ ದಿನಾಂಕದ ಎಜಿಎಂನ ತಿಳುವಳಿಕೆ (ಎಜಿಎಂ ನೋಟಿಸ್) ಪತ್ರದಲ್ಲಿ ತಿಳಿಸಿದ ವಿಷಯಗಳನ್ನು ವ್ಯವಹರಿಸುವುದಕ್ಕಾಗಿ ನಡೆಯಲಿದೆ.
2. 2013 ರ ಕಂಪನಿಗಳ ಕಾಯಿದೆಯ ಕಲಂ 91ರ ಮತ್ತು 2015ರ ಸೆಬಿಯ ನಿಯಂತ್ರಣ (ಲಿಸ್ಟಿಂಗ್ ಹೊಣೆಗಾರಿಕೆಗಳು) ಮತ್ತು ಬಹಿರಂಗ ಪಡಿಸುವಿಕೆಯ ಅವಶ್ಯಕತೆಗಳು (ಲಿಸ್ಟಿಂಗ್ ನಿಯಂತ್ರಣಗಳು) ಅನ್ವಯಿಸುವ ನಿಯಂತ್ರಣಗಳೇನಾದರೂ ಇದ್ದಲ್ಲಿ ಅವುಗಳನ್ವಯ ಸದಸ್ಯರ ಮತ್ತು ಷೇರುದಾರರ ವರ್ಗಾವಣೆ ಪುಸ್ತಕವನ್ನು 14ನೇ ಡಿಸೆಂಬರ್ 2017 ರ ಗುರುವಾರದಿಂದ 21ನೇ ಡಿಸೆಂಬರ್ 2017ರ ಗುರುವಾರದವರೆಗೆ (ಎರಡೂ ದಿನಗಳು ಸೇರಿದಂತೆ) ಮುಚ್ಚಿರಲಾಗುತ್ತದೆ.
3. 2013ರ ಹಾಗೂ ತದನಂತರದ ಕಂಪನಿಗಳ ಕಾಯಿದೆಯ ಕಲಂ 108 ಮತ್ತು 2015ರ ಸೆಬಿಯ ನಿಯಂತ್ರಣಗಳ (ಲಿಸ್ಟಿಂಗ್ ಹೊಣೆಗಾರಿಕೆಗಳು ಮತ್ತು ಬಹಿರಂಗ ಪಡಿಸುವಿಕೆಯ ಅವಶ್ಯಕತೆಗಳು) ನಿಯಂತ್ರಣ 44 ರನ್ವಯ ಕಂಪನಿಯು ತನ್ನ ಸದಸ್ಯರುಗಳಿಗೆ ವಿದ್ಯುನ್ಮಾನದ ಮೂಲಕ ಮತದಾನ (ಅದೃಶ್ಯ ಇ-ಮತದಾನ) ಮಾಡುವ ಸೌಲಭ್ಯವನ್ನು ಒದಗಿಸಲು ಹರ್ಷಿಸುತ್ತದೆ. ಸದಸ್ಯರು ಇದರ ಮೂಲಕ ಅಂದರೇ ಇ-ಮತದಾನದ ಸೌಲಭ್ಯದ ಮೂಲಕ ಎಜಿಎಂ ತಿಳುವಳಿಕೆಯಲ್ಲಿ ತಿಳಿಸಿದ ವಿಷಯಗಳ ಬಗ್ಗೆ ಮತದಾನ ಮಾಡುವುದಕ್ಕಾಗಿ ಇ-ಮತದಾನ ಸೌಲಭ್ಯ ಬಳಸಿಕೊಳ್ಳಬಹುದಾಗಿರುತ್ತದೆ.
4. ಕಂಪನಿಯು 27ನೇ ನವೆಂಬರ್, 2017 ರಂದು ಇದ್ದಂತೆ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಮತ್ತು ಸೆಂಟ್ರಲ್ ಡಿಪಾಜಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ಇವರು ನಿರ್ವಹಿಸುತ್ತಿರುವ ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಹೆಸರಿರುವ ಷೇರುದಾರರಿಗೆ 2016-17ರ ಹಣಕಾಸು ವರ್ಷದ ವಾರ್ಷಿಕ ವರದಿಯೊಂದಿಗಿರುವ ಮಹಾಸಭೆಯ ತಿಳುವಳಿಕೆ ಪತ್ರಗಳ ರವಾನೆಯನ್ನು ಇದೇ ನವೆಂಬರ್ 2017ರ 10ನೇ ದಿನಾಂಕದಂದು ಪೂರ್ಣಗೊಳಿಸಲಾಗಿದೆ. ಯಾವ ಸದಸ್ಯರು ತಮ್ಮ ಇಮೇಲ್ ವಿಳಾಸವನ್ನು ಎನ್‌ಎಸ್‌ಡಿಎಲ್/ಸಿಡಿಎಸ್‌ಎಲ್/ಕಂಪನಿಯಲ್ಲಿ ನೋಂದಾಯಿಸಿಕೊಂಡಿರುವರೋ ಅಂತಹ ಸದಸ್ಯರುಗಳಿಗೆ ಇಮೇಲ್ ಮೂಲಕ ಮತ್ತು ಯಾವ ಸದಸ್ಯರು ಇಮೇಲ್ ವಿಳಾಸವನ್ನು ನೋಂದಾಯಿಸಿಕೊಂಡಿಲ್ಲವೋ ಅಂತಹ ಸದಸ್ಯರಿಗೆ ಭೌತಿಕ ನಮೂನೆಯಲ್ಲಿ ಮಹಾಸಭೆಯ ತಿಳುವಳಿಕೆ ಪತ್ರಗಳನ್ನು ರವಾನಿಸಲಾಗಿದೆ.
5. ನಿಗದಿತ ದಿನಾಂಕರಂದು (ಕಟ್ ಆಫ್ ಡೇಟ್) ಅಂದರೆ ಡಿಸೆಂಬರ್ 15, 2017 ರಂದು ಇದ್ದಂತೆ ಭೌತಿಕ ನಮೂನೆ ಅಥವಾ ಅಭೌತಿಕ ನಮೂನೆಯಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರದಲ್ಲಿ ತಿಳಿಯಪಡಿಸಿರುವ ವಿಷಯಗಳ ಮೇಲೆ ತಮ್ಮ ಮತವನ್ನು ವಿದ್ಯುನ್ಮಾನದ ಮೂಲಕ, ಅಂದರೆ ಮೆ|| ಕಾರ್ವಿ ಕಂಪ್ಯೂಟರ್‌ಷೇರ್ ಪ್ರೈವೇಟ್ ಲಿಮಿಟೆಡ್ (ಕಾರ್ವಿ) ಇವರು ಒದಗಿಸುವ ವಿದ್ಯುನ್ಮಾನ ಮತದಾನ ವ್ಯವಸ್ಥೆ ಮೂಲಕ ವಾರ್ಷಿಕ ಮಹಾಸಭೆಯು ನಡೆಯುವ ಸ್ಥಳವನ್ನು ಬಿಟ್ಟು ಬೇರೆ ಸ್ಥಳಗಳಿಂದ ದೂರದ ಇ-ಮತದಾನ (ರಿಮೋಟ್ ಇ-ವೋಟಿಂಗ್)ದ ಮೂಲಕ ತಮ್ಮ ಮತಗಳನ್ನು ಚಲಾಯಿಸಬಹುದಾಗಿರುತ್ತದೆ. ಸದಸ್ಯರುಗಳಿಗೆ ನೀಡುವ ಮಾಹಿತಿಯೇನೆಂದರೇ:
   - i. ವಾರ್ಷಿಕ ಮಹಾಸಭೆಯ ಸೂಚನೆಯಲ್ಲಿ ತಿಳಿಸಿದ ವಿಷಯಗಳ ವ್ಯವಹಾರಗಳನ್ನು ವಿದ್ಯುನ್ಮಾನದ ಮೂಲಕ ನಡೆಸಬಹುದಾಗಿದೆ.
   - ii. ದೂರದ ಇ-ಮತದಾನವು (ಇ-ವೋಟಿಂಗ್) 10ನೇ ಡಿಸೆಂಬರ್ 2017 ರ ಬೆಳಿಗ್ಗೆ 09.00 ಕ್ಕೆ ಆರಂಭವಾಗುತ್ತದೆ.
   - iii. ಅದೃಶ್ಯ ಇ-ಮತದಾನವು 20ನೇ ಡಿಸೆಂಬರ್ 2017 ರಂದು ಸಂಜೆ 05.00 ಕ್ಕೆ ಮುಕ್ತಾಯಗೊಳ್ಳುತ್ತದೆ.
   - iv. ವಿದ್ಯುನ್ಮಾನ ಮೂಲಕದ ಮತದಾನಕ್ಕೆ ಅಥವಾ ವಾರ್ಷಿಕ ಮಹಾಸಭೆಯಲ್ಲಿ ಮತದಾನ ಮಾಡಲು ಅರ್ಹತೆ ನಿರ್ಧರಿಸುವುದಕ್ಕಾಗಿ ನಿಗದಿತ ದಿನಾಂಕವು (ಕಟ್ ಆಫ್ ಡೇಟ್) 15ನೇ ಡಿಸೆಂಬರ್ 2017 ಆಗಿರುತ್ತದೆ.
   - v. ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರ ರವಾನೆಯ ನಂತರ ಕಂಪನಿಯ ಷೇರುಗಳನ್ನು ಹೊಂದಿ ಕಂಪನಿಯ ಸದಸ್ಯರಾಗುತ್ತಾರೋ ಅಂತಹ ವ್ಯಕ್ತಿಗಳು ಮತ್ತು ನಿಗದಿತ ದಿನಾಂಕವಾದ 15ನೇ ಡಿಸೆಂಬರ್ 2017 ರಂದು ಇದ್ದಂತೆ ಷೇರುಗಳನ್ನು ಹೊಂದಿರುತ್ತಾರೋ ಅವರು einward.ris@karvy.com ಗೆ ಇಮೇಲ್ ಮಾಡಬೇಕು ಅಥವಾ ಮೆ|| ಕಾರ್ವಿ ಕಂಪ್ಯೂಟರ್ ಷೇರ್ ಪ್ರೈವೇಟ್ ಲಿಮಿಟೆಡ್ ಘಟಕ: ಶ್ರೀ ರೇಣುಕಾ ಶುಗರ್ಸ್ ಲಿಮಿಟೆಡ್, ಕಾರ್ವಿ ಸೇಲಿನಿಯಂ ಟವರ್ ಬಿ, ಪ್ಲಾಟ್ 31-32, ಗಚ್ಚಿಬೌಲಿ, ಫೈನಾನ್ಸಿಯಲ್ ಡಿಸ್ಟ್ರಿಕ್ಟ್, ನಾನಕ್ ರಾಮ್ ಗುಡ, ಹೈದರಾಬಾದ್-500 032 ಇಲ್ಲಿಗೆ ಬರೆದುಕೊಂಡು ವಾರ್ಷಿಕ ಮಹಾಸಭೆಯ ಸೂಚನೆ ಮತ್ತು ಮತದಾನಕ್ಕೆ ಅನುಸರಿಸಬೇಕಾದ ಕ್ರಮಗಳನ್ನು ಪಡೆದುಕೊಳ್ಳಬೇಕು.
   - vi. ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕಾದುದೇನೆಂದರೇ (ಎ) ಮೆ|| ಕಾರ್ವಿಯವರು ಇ-ಮತದಾನಕ್ಕಾಗಿರುವ ಮೇಲೆ ತಿಳಿಸಿರುವ ದಿನಾಂಕ ಮತ್ತು ಸಮಯಕ್ಕೆ ಅದೃಶ್ಯ ಇ-ಮತದಾನದ ಮಾಡ್ಯೂಲನ್ನು, ಸದಸ್ಯರು ಒಮ್ಮೆ ಠರಾವಿನ ಮೇಲೆ ಮತದಾನ ಮಾಡಿದ ನಂತರ ಇ-ಮತದಾನದ ಮಾಡ್ಯೂಲನ್ನು ನಿಷ್ಕ್ರಿಯಗೊಳಿಸುತ್ತದೆ. ತದನಂತರ ಸದಸ್ಯರು ತಮ್ಮ ಮತವನ್ನು ಬದಲಾಯಿಸಲು ಅನುಮತಿ ನೀಡುವುದಿಲ್ಲ (ಬಿ) ವಾರ್ಷಿಕ ಮಹಾಸಭೆಯಲ್ಲಿ ಬ್ಯಾಲೆಟ್ ಪೇಪರ್ ಮೂಲಕದ ಮತದಾನವನ್ನು ವ್ಯವಸ್ಥೆ ಮಾಡಿರಲಾಗುತ್ತದೆ ಮತ್ತು (ಸಿ) ಯಾವ ಸದಸ್ಯರು ವಾರ್ಷಿಕ ಮಹಾಸಭೆಗೆ ಮುಂಚೆಯೇ ಅದೃಶ್ಯ ಇ-ಮತದಾನದ ಮೂಲಕ ಮತ ಚಲಾಯಿಸಿರುವರೋ ಅಂತಹವರು ವಾರ್ಷಿಕ ಮಹಾಸಭೆಗೆ ಹಾಜರಿರಬಹುದಾಗಿರುತ್ತದೆ ಆದರೆ ಮತದಾನ ಮಾಡುವಂತಿಲ್ಲ (ಡಿ) ನಿಗದಿತ ದಿನಾಂಕ (ಕಟ್‌ಆಫ್ ಡೇಟ್) ದಂದು ಯಾವ ವ್ಯಕ್ತಿಯ ಹೆಸರು ಸದಸ್ಯರು ಡಿಪಾಜಿಟರಿಸ್ ರವರು ನಿರ್ವಹಿಸುತ್ತಿರುವ ಸದಸ್ಯರ ರಿಜಿಸ್ಟರ್‌ನಲ್ಲಿ ಅಥವಾ ಫಲಾನುಭವಿಮಾಲೀಕರರಿಜಿಸ್ಟರ್‌ನಲ್ಲಿದಾಖಲೆಯಾಗಿರುತ್ತದೆಯೋಅಂತಹವರು ಅದೃಶ್ಯ ಮತದಾನ ಅಥವಾ ವಾರ್ಷಿಕ ಮಹಾಸಭೆಯಲ್ಲಿ ಬ್ಯಾಲೆಟ್ ಪೇಪರ್ ಮೂಲಕ ಮತದಾನದ ಸೌಲಭ್ಯವನ್ನು ಪಡೆದುಕೊಳ್ಳಬಹುದಾಗಿರುತ್ತದೆ.
   - vii. ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರವು ಕಂಪನಿಯ ವೆಬ್‌ಸೈಟ್ www.renukasugars.com ಮತ್ತು ಅಲ್ಲದೇ ಕಾರ್ವಿ ವೆಬ್‌ಸೈಟ್ www.evoting.karvy.com ನಲ್ಲಿ ಲಭ್ಯವಿರುತ್ತದೆ ಮತ್ತು
   - viii. ಯಾವುದೇ ಸ್ಪಷ್ಟನೆ ವಿವರಣೆಗಳಿಗಾಗಿ ಷೇರುದಾರರಿಗೆ ಲಭ್ಯವಿರುವ ಎಫ್ ಎಕ್ಯೂ (ಫ್ರಿಕ್ವೆಂಟ್ಲಿ ಆಸ್ಕಡ್ ಕ್ವಶ್ಚನ್ಸ್ - ಪದೇ ಪದೇ ಕೇಳುವ ಪ್ರಶ್ನೆಗಳು) ಯನ್ನು ನೋಡಬಹುದಾಗಿರುತ್ತದೆ ಮತ್ತು https//evoting.karvy.com ನಲ್ಲಿ ಲಭ್ಯವಿರುವ ಷೇರುದಾರರಿಗಾಗಿನ ಇ-ಮತದಾನದ ಮ್ಯಾನ್ಯುಯಲ್ ಅನ್ನು ನೋಡಿಕೊಳ್ಳಬಹುದಾಗಿರುತ್ತದೆ ಅಥವಾ ಶ್ರೀ ಆನಂದನ್ ಕೆ. ವ್ಯವಸ್ಥಾಪಕ - ಕಾರ್ಪೊರೇಟ್ ರಿಜಿಸ್ಟ್ರಿ, ಮೆ|| ಕಾರ್ವಿ, ದೂರವಾಣಿ ಸಂ. 040-6716 2222 ಅಥವಾ ಇಮೇಲ್ einward.ris@karvy.com ಮೂಲಕ ಇವರನ್ನು ಸಂಪರ್ಕಿಸಬೇಕು ಅಥವಾ 1800-3454-001 (ಶುಲ್ಕ ರಹಿತ) ಕರೆಮಾಡಿ ಪಡೆದುಕೊಳ್ಳಬಹುದಾಗಿರುತ್ತದೆ.

ಶ್ರೀ ರೇಣುಕಾ ಶುಗರ್ಸ್ ಲಿಮಿಟೆಡ್
ರೂಪೇಶ್ ಸರಿಯಾ
ಕಂಪನಿ ಕಾರ್ಯದರ್ಶಿ

ದಿನಾಂಕ : 27ನೇ ನವೆಂಬರ್, 2017
ಸ್ಥಳ : ಮುಂಬೈ

ಭಾರತ ಸರ್ಕಾರ
ಸಾಲ ವಸೂಲಾತಿ ನ್ಯಾಯಾಧಿಕರಣ – ಕರ್ನಾಟಕ
ನಂ. 4, 1ನೇ ಮಹಡಿ, ಜೀವನ್ ಮಂಗಳ ಕಟ್ಟಡ, ರೆಸಿಡೆನ್ಸಿ ರಸ್ತೆ, ಬೆಂಗಳೂರು-560025

ಟಿಆರ್‌ಸಿ / 1733 /17 ಡಿಆರ್‌ಸಿ ನಂ.10267/16 05.06.2017

ಎಕ್ಸಿಸ್ ಬ್ಯಾಂಕ್ ಲಿಮಿಟೆಡ್, ಶಾಂತಿನಗರ, ಬೆಂಗಳೂರು ...ಸರ್ಟಿಫಿಕೇಟ್ ಹೋಲ್ಡರ್
ವಿರುದ್ಧ
ಶ್ರೀ ಸಿದ್ದಪ್ಪ ದುಂಡಪ್ಪ ನಾಯ್ಕ್ ಮತ್ತು ಇತರರು

ತಗಾದೆ ನೋಟೀಸು

1. ಶ್ರೀ ಸಿದ್ದಪ್ಪ **ದುಂಡಪ್ಪ ನಾಯ್ಕ್,** ದೇವರದೇರಟ್ಟಿ ಗ್ರಾಮ, ಅಥಣಿ ತಾಲ್ಲೂಕು, ಬೆಳಗಾಂ **2. ಶ್ರೀಮತಿ ಶೋಭ ಸಿದ್ದಪ್ಪ ನಾಯ್ಕ್** ದೇವರದೇರಟ್ಟಿ ಗ್ರಾಮ, ಅಥಣಿ ತಾಲ್ಲೂಕು, ಬೆಳಗಾಂ **3. ಶ್ರೀಮತಿ ಕಮಲವ್ವ @ ಕಮಲಬಾಯಿ ದುಂಡಪ್ಪ ನಾಯ್ಕ್,** ದೇವರದೇರಟ್ಟಿ ಗ್ರಾಮ, ಅಥಣಿ ತಾಲ್ಲೂಕು, ಬೆಳಗಾಂ **4. ಶ್ರೀ ಮಲ್ಲಪ್ಪ ಸುಬ್ಬರಾಯ್,** ಮೆಟ್ಟಗುದ್ದ ಹೊಸಟ್ಟಿ (ದೇವರದೇರಟ್ಟಿ) ಅಥಣಿ ತಾಲ್ಲೂಕು, ಬೆಳಗಾಂ ಜಿಲ್ಲೆ. **5. ಶ್ರೀ ಉಮೇಶ್‌ರಾವ್ ವೆಂಕಟರಾವ್ ಬೊಂಟಡ್ಕರ್,** ಸಿಟಿಎಸ್ ನಂ. 1294, ಮುಖ್ಯ ರಸ್ತೆ, ಅಥಣಿ, ದೇವರದೇರಟ್ಟಿ ಗ್ರಾಮ, ಅಥಣಿ ತಾಲ್ಲೂಕು, ಬೆಳಗಾಂ.

ನ್ಯಾಯಾಧೀಶರು ಡಿಆರ್‌ಟಿ, ಬೆಂಗಳೂರು ರವರು **O.A ಸಂಖ್ಯೆ 217/2016**ರಲ್ಲಿ ತಮ್ಮ ವಿರುದ್ಧ **ರೂ. 27,71,763/–** (ರೂಪಾಯಿ ಇಪ್ಪತ್ತೇಳು ಲಕ್ಷದ ಎಪ್ಪತ್ತೊಂದು ಸಾವಿರದ ಏಳು ನೂರ ಅರವತ್ತ ಮೂರು ಮಾತ್ರ) ಬಾಕಿ ಇರುತ್ತದೆ.

ಮೇಲೆ ತಿಳಿಸಿದ ನೀವು ಮೇಲೆ ತಿಳಿಸಿದ ಸಾಲದ ಮೊತ್ತವನ್ನು ಈ ನೋಟೀಸು ಸ್ವೀಕರಿಸಿದ 15 ದಿನಗಳ ಒಳಗಾಗಿ ಪಾವತಿಸತಕ್ಕದ್ದು ಒಂದು ವೇಳೆ ವಿಫಲರಾದಲ್ಲಿ, ನಿಯಮಾನುಸಾರ ಸಾಲದ ಹಣವನ್ನು ವಸೂಲಿ ಮಾಡಲಾಗುವುದು. ಜೊತೆಗೆ ಅಂದಾಜು ಮೊತ್ತಕ್ಕೆ ಸೇರ್ಪಡೆಯಾಗಿ ನೀವು ಪಾವತಿಸಲು ಜವಾಬ್ದಾರರಾಗಿರುತ್ತೀರಿ. ಎ) O.A ನಲ್ಲಿ ಮರಣದಂಡನೆ ಪ್ರಕ್ರಿಯೆಗಳ ಈ ಸೂಚನೆ ನಂತರ ತಕ್ಷಣವೇ ಪ್ರಾರಂಭವಾಗುವ ಅವಧಿಯವರೆಗೆ ಬಡ್ಡಿಯನ್ನು ಪಾವತಿಸಬೇಕಾಗುತ್ತದೆ. ಬಿ) ಎಲ್ಲಾ ಖರ್ಚುಗಳು, ವೆಚ್ಚಗಳು ಮತ್ತು ಇತರ ಪ್ರಕ್ರಿಯೆಯ ಕಾರಣದಿಂದಾಗಿ ಹಣವನ್ನು ತೆಗೆದುಕೊಳ್ಳಬಹುದು.

ನನ್ನ ಹಸ್ತದಿಂದ ಟ್ರಿಬ್ಯೂನಲ್ ಮೊಹರಿನೊಂದಿಗೆ **ದಿನಾಂಕ 05ನೇ ಜೂನ್ 2017** ರಂದು ನೀಡಲಾಗಿದೆ.

ಗಮನಿಸಿ: ಈ ಕೆಳಗೆ ನಕಲು ಮಾಡಲಾಗಿರುವ 1961ರ ಆದಾಯ ತೆರಿಗೆ ಕಾಯ್ದೆ, ನಿಯಮ 16ರ ಎರಡನೇ ಅನುಸೂಚಿಯೊಂದಿಗೆ ಓದಲ್ಪಡುವ 1993ರ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳ ಬಾಕಿ ಸಾಲ ವಸೂಲಾತಿ ಕಾಯ್ದೆಯತ್ತ ಗಮನವನ್ನು ಸೆಳೆಯಲಾಗಿದೆ:

"ನಿಯಮ 16 (1)ರ ಎರಡನೇ ನಿಯಮದಡಿಯಲ್ಲಿ ಸುಸ್ತಿದಾರನಿಗೆ ನೋಟೀಸ್ ಒಂದನ್ನು ನೀಡಲಾಗಿದ್ದು, ಸುಸ್ತಿದಾರ ಅಥವಾ ಆತನ ಪ್ರತಿನಿಧಿ ಅಥವಾ ಆತನ ಹಿತಾಸಕ್ತ ಪ್ರತಿನಿಧಿಯು, ಸಾಲ ವಸೂಲಾತಿ ಅಧಿಕಾರಿಯ ಅನುಮತಿಯ ಹೊರತಾಗಿ, ಸುಸ್ತಿದಾರನಿಗೆ ಸೇರಿದ ಯಾವುದೇ ಸ್ವತ್ತನ್ನು, ಅಡಮಾನವಿಡಲಾಗಲಿ, ಶುಲ್ಕ ಪಡೆಯಲಾಗಲಿ, ಗುತ್ತಿಗೆ ನೀಡಲಾಗಲಿ ಅಥವಾ ಬೇರೆ ಯಾವುದೇ ರೀತಿಯಲ್ಲಾಗಲಿ ವ್ಯವಹರಿಸಲು ಅರ್ಹರಾಗಿರುವುದಿಲ್ಲ ಅಥವಾ ಯಾವುದೇ ಸಿವಿಲ್ ನ್ಯಾಯಾಲಯವು ಹಣ ಪಾವತಿಗಾಗಿ ಇಂತಹ ಆಸ್ತಿಯ ಮೇಲೆ ಯಾವುದೇ ಕಾನೂನು ಕ್ರಮವನ್ನು ಹೊರಡಿಸಿ, ಆ ಕಟ್ಟಳೆಯನ್ನು ಜಾರಿ ಮಾಡುವಂತಿರುವುದಿಲ್ಲ."

ಈ ಅನುಸೂಚಿಯಡಿಯಲ್ಲಿ ಲಗತ್ತೊಂದನ್ನು ನೀಡಲಾಗಿದ್ದು, ಯಾವುದೇ ಖಾಸಗಿ ವರ್ಗಾವಣೆ ಅಥವಾ ಒತ್ತೆಯಿಡಲಾದ ಆಸ್ತಿ ಅಥವಾ ಅದನ್ನು ಒಳಗೊಂಡ ಯಾವುದೇ ಹಕ್ಕು ಅಥವಾ ಬಡ್ಡಿಯ ಹಂಚಿಕೆ, ಅಥವಾ ಈ ಲಗತ್ತಿಗೆ ವಿರುದ್ಧವಾಗಿ ಸುಸ್ತಿದಾರನಿಗೆ ಮಾಡಲಾಗುವ ಯಾವುದೇ ಸಾಲ ಸಂದಾಯ, ಲಾಭಾಂಶ ಅಥವಾ ಇತರ ಯಾವುದೇ ಹಣಕಾಸು ಪಾವತಿಯು ಲಗತ್ತಿನಡಿಯಲ್ಲಿ ಬರುವ ಎಲ್ಲಾ ಅಧಿಕಾರಗಳನ್ವಯ, ಅನೂರ್ಜಿತಗೊಳ್ಳುತ್ತದೆ".

ರಿಕವರಿ ಆಫೀಸರ್–I
ಸಾಲ ವಸೂಲಾತಿ ನ್ಯಾಯಾಧಿಕರಣ-II, ಬೆಂಗಳೂರು

ಅ. ದಾ. ನಂ. 62/ 1998
ಮೆ. ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಜಮಖಂಡಿ. ಇವರ ನ್ಯಾಯಾಲಯದಲ್ಲಿ.
1. ಶ್ರೀ ರಾಮಪ್ಪ ಹಣಮಂತ ಸೀತವ್ವಗೋಳ ಹಾಗೂ ಇತರರು. -- ವಾದಿಯರು
ವಿರುದ್ಧ
1. ಶ್ರೀ. ಪಂಚಯ್ಯ ದಾನಯ್ಯ ಹಿರೇಮಠ ಹಾಗೂ ಇತರರು. -- ಪ್ರತಿವಾದಿಯರು ಗೆ,
ಮೃತ ಪ್ರತಿವಾದಿಯರ ವಾರ್ಸ ನೋಟೀಸ
1ಎ) ಶ್ರೀಮತಿ ಕಮಲವ್ವ ಗಂ.ಪಂಚಯ್ಯ ಹಿರೇಮಠ
ಸಾ; ಶಿವಪುತ್ರಮಠ-ಶಿಕಾರಿಪುರ ಜಿಲ್ಲಾ- ಶಿವಮೊಗ್ಗಾ
1ಬಿ) ಶ್ರೀ. ಸಿದ್ದಲಿಂಗ ಪಂಚಯ್ಯ ಹಿರೇಮಠ
ಸಾ; ಶಿವಪುತ್ರಮಠ-ಶಿಕಾರಿಪುರ ಜಿಲ್ಲಾ- ಶಿವಮೊಗ್ಗಾ
2ಬಿ) ಶ್ರೀಮತಿ. ದಾನವ್ವ ಗಂ. ಬಸಯ್ಯ ಹಿರೇಮಠ
ಸಾ; ಶಿವಪುತ್ರಮಠ-ಶಿಕಾರಿಪುರ ಜಿಲ್ಲಾ- ಶಿವಮೊಗ್ಗಾ
7ಡಿ) ಶ್ರೀ. ಮಲ್ಲಿಕಾರ್ಜುನ ಸಂಗಪ್ಪ ಬಳವಾಡ
ಸಾ; ಯಲ್ಪಾರಟ್ಟಿ- ತಾ; ರಾಯಬಾಗ ಜಿ- ಬೆಳಗಾವಿ.
8ಬಿ) ಶ್ರೀ. ಅನಂತ ವಸಂತ ಕುಲಕರ್ಣಿ
ಸಾ; ಕಾಜಿಬೀಳಗಿ ತಾ; ಜಮಖಂಡಿ.

ಜಾಹೀರ ನೋಟಿಸು

ಮೇಲ್ಕಾಣಿಸಿದ ಪ್ರಕರಣವನ್ನು ಮಾನ್ಯ ನ್ಯಾಯಾಲಯದಲ್ಲಿ ದಾವಾ ದಾಖಲ ಮಾಡಿದ್ದು, ಕಾರಣ ಈ ಮೂಲಕ ನಿಮಗೆ ತಿಳಿಸುವದೆನೆಂದರೆ, ಸದರಿ ಪ್ರಕರಣದಲ್ಲಿಯ ನಿಮಗೆ ಯಾವುದೇ ಹಕ್ಕು ವ ಹಿತಾಸಕ್ತಿ ಇದ್ದಲ್ಲಿ ನೀವು ಸ್ವತ: ಆಗಲಿ ಅಥವಾ ವಕೀಲರ ಮುಖಾಂತರವಾಗಲಿ ದಿನಾಂಕ 12–12–2017 ರಂದು ಬೆಳಿಗ್ಗೆ 11 ಘಂಟೆಗೆ ಈ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ಆಕ್ಷೇಪಣೆ ಸಲ್ಲಿಸಬೇಕು. ಇಲ್ಲವಾದಲ್ಲಿ ಸದರಿ ಪ್ರಕರಣವನ್ನು ಎಕ ಪಕ್ಷೀಯವಾಗಿ ನಿರ್ಣಯಿಸಲಾಗುವದು.

ನ್ಯಾಯಾಲಯದ ಆಡಳಿತ ಮತ್ತು ಮೊಹರಿನೊಂದಿಗೆ ಈ ದಿನ 16–11–2017 ರಂದು ನೀಡಲಾಗಿದೆ.

ಜಮಖಂಡಿ
ದಿನಾಂಕ: 16–11–2017 Seal

ಸಹಿ/– (ಬಿ.ಆರ್. ಹುನ್ನೂರಕರ) ಶಿರಸ್ತೆದಾರರು
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶ ಜಮಖಂಡಿ ಇವರ ನ್ಯಾಯಾಲಯ
ಸಹಿ/– (ಶ್ರೀ ಡಿ.ಬಿ. ಬಾಂಗಿ)
ವಕೀಲರು ಜಮಖಂಡಿ.

P & Sc.No:15/2017
IN THE COURT OF HON'BLE II Addl JUNIOR CIVIL JUDGE VIJAYAPUR. AT: VIJAYAPUR
Petitioners : (1)M N Patil (2) Sharada Patil (3)Geeta Patil (4) Sujalagouda Patil
V/S
Respondent : NIL
CITATION UNDER ORDER V RULE 20 (1) (A) OF CPC

Where as Petitioner no 1 to 4 have filed the above said petition for seeking succession certificate to petitioners so as to enable them to receive MIS a/c No; 90700059 and SB A/C No;28467325 41of late Shri Naganagouda Ramanagouda Patil at Indian post Jalanagar branch office Jalanagar Vijayapur.

That if any of the interested persons / claimants hereby called upon you for any objections that on 04/01/2018 at 11am before this Hon'ble court. Failing of which this Hon'ble court will be pass necessary orders with in your absence.

Given under my hand, order and seal of this Hon'ble court on this day 21/11/2017

Vijayapur
21/11/2017

By Order of the Court,
Shirestedar
Civil Judge (Jr.Dn) Vijayapur

B B Patil
Advocate for Petitioners, Vijayapur